* * *

ಭೀಮಪ್ಪಯ್ಯನಿಗೆ ಒಟ್ಟು ಏಳು ಜನ ಮಕ್ಕಳು. ಅವರಲ್ಲಿ ಚಿಕ್ಕವನೇ ಕರಿಯ, ಏಳು ಜನ ಅಣ್ಣಂದಿರ ನಡುವೆ ಮನೆಯ ಮುದ್ದು ಮಗನಾಗಿ ಬೆಳೆದಿದ್ದ, ಕರಿಯನನ್ನು ನೋಡಿದರೆ ಭೀಮಪ್ಪನಿಗೆ ಎಲ್ಲಿಲ್ಲದ ಪ್ರೀತಿ. 'ನನ್ನ ಆರು ಜನ ಮಕ್ಕಳನ್ನು ತನ್ನ ಸಂಸಾರದ ದೋಣಿ ಸಾಗಿಸಲು. ಅವರಲ್ಲಿ ಒಬ್ಬರನ್ನು ವಿದ್ಯಾವಂತನನ್ನಾಗಿ ಮಾಡ್ಲಾಗಲಿಲ್ಲಾ. ಈ ಕರಿಯನನ್ನು ಹೊಲದಲ್ಲಿ ಕ್ಯಾಮೆ ಮಾಡಲು ಹಚ್ಚಬಾರದೆಂದು' ಆ ಊರಿನ ಪ್ರೈಮರಿ ಶಾಲೆಗೆ ಓದಲು ಹಚ್ಚಿದ್ದು. ಇನ್ನು ಉಳಿದ ಆರು ಜನರನ್ನು ಗೌಡ್ರ ಹೊಲ್ದಲ್ಲಿ ಗೇಣಿ ಮಾಡೋಕೆ, ಅವರಿವ್ರ ಹೊಲಗಳ್ನ ಕೋರಿಗೆ ಹಿಡ್ದು ಉಳುಮೆ ಮಾಡೋಕೆ ಹಚ್ಚಿದ. ಭೀಮಪ್ಪನದು ಸ್ವಂತ ಭೂಮಿಯಂತ ಅವ್ರು ಮುತ್ಯಾರು ಮಾಡಿ ಹೋದ ಒಂದು ಎಕರೆ ತುಂಡು ಭೂಮಿ ಇತ್ತು, ಅದು ದೇವರಾಜು ಅರಸ್ರು ಕೊಟ್ಟದ್ದು ಅಂತ ಅವ್ರು ತಂದೆ ಹೇಳಿದ್ನು, ಈ ಹೊಲಕ್ಕೆ ಬೋರು ಗೀರು ಹಾಕಿಸೋ ಯೋಚ್ನೆಯಲ್ಲಿರುವಾಗ, ಊರಿನ ಪಂಚಾಯ್ತಿಗೆ ಭೇಟಿ ಕೊಟ್ಟಾಗ 'ನಿಮ್ಮ ಜ್ಯಾತಿಯವ್ರಿಗೆ ಗಂಗಾಕಲ್ಯಾಣ ಬೋರು ಬರತ್ತವೆ ನೋಡ್ಲೆ, ಕರೆಂಟು ಗಿರೆಂಟು, ಪಂಪ್ ಮೋಟ್ರು ಅವರೇ ಕೊಟ್ಟು ನಿನ್ನ ಹೊಲಕ್ಕೆ ನೀರು ಹರಿಸಿ ಹೋಗತ್ತವ್ರೇ, ಎಲ್ಲನೂ ಫ್ರೀ ಮಾಡ್ತವರಂತೆ' ಎಂದು ಪಂಚಾಯ್ತಿ ಸರಪಂಚ್ ಹೇಳಿದ್ದನ್ನು ಕೇಳಿದ ಭೀಮಪ್ಪನು, ಮಹದಾಸೆಯಿಂದ ಆ ಹೊಲನ ತೋಟ ಮಾಡೋ ಕನಸು ಕಂಡಿದ್ದ. ಅದ್ರಂತೆ ಅವರಿವರ ಕಾಲಿಗೆ ಬಿದ್ದು, ರೊಕ್ಕ ಗಿಕ್ಕಾ ಕೊಟ್ಟು ಒಂದು ರಾತ್ರಿಯಿಡಿ ಬೋರ್ ಕೊರಿಸಿದ್ರು, ನೀರು ಹೊಲದ ತುಂಬಾ ಹರಿದಿರೋದು ನೋಡಿ ಭೀಮಪ್ಪ ಮುತ್ಯಾರ್ನ ನೆನೆಸಿಕೊಂಡ. ಆ ಹೊಲಕ್ಕೆ ನೂರು ಅಡಿಕೆ ಗಿಡಗಳನ್ನು ಹಾಕಿದ್ರು. ಅದರೆ ಅವು ಫಸಲು ಬಂದೇಬಿಡ್ತು ಅಂಬೋ ಹೊತ್ತಿಗೆ ಬೋರ್‌ವೆಲ್‌ನಲ್ಲಿ ನೀರು ಹೋಗಿದ್ದು, ಅದೇ ವರುಷ ಮಳೆ ಬಾರದೇ ಬರಗಾಲ ಅವರಿಸಿದ್ದು, ಇವೆರಡು ಮಧ್ಯೆ ಸಿಲುಕಿದ ಅಡಿಕೆ ತೋಟದ ಮರಗಳೆಲ್ಲಾ, ಭೀಮಪ್ಪನ ಕಣ್ಣೀರಿನ ನಡುವೆ ಬೆಂದು ಬೆಂಡಾಗಿ ನೆಲಕ್ಕುರುಳಿದವು. ಇದರಿಂದ ಬೇಸತ್ತ ಭೀಮಪ್ಪ ಅವುಗಳನ್ನೆಲ್ಲಾ ಕಡಿದು ನೆಲಕ್ಕುರುಳಿಸುವಾಗ, 'ತೋಟ ಮಾಡುವುದು ನಮ್ಮಂಥ ಬಡವರಿಗೇಕೆ, ಹೊಟ್ಟೆಗಿ ಹಿಟ್ಟುಯಿಲ್ಲಾಂದ್ರೆ, ಜುಟ್ಟಿಗೆ ಮಲ್ಲಿಗೆ ಹೂವು ಮುಡಿಸಿಕೊಂಡಾಂಗೆ ಆಯ್ತು ನನ್ನ ಬಾಳು' ಎಂದು ಸಮಾಧಾನಾ ಮಾಡಕೊಂಡು ತೋಟ ಮಾಡಿ ಸೋತ. ಮರು ವರುಷದಿಂದ ಮುಂಗಾರಿ ಮಳೆಗೆ ಹೊಲದ ತುಂಬಾ ರಾಗಿ ಬಿತ್ತಿ, ಮನೆತುಂಬಾ ಕಾಳುಕಡಿ ಬೆಳೆದುಕೊಳ್ಳುತ್ತಿದ್ನು. ಹೀಗಾಗಿ ಮನೇಲಿ ಉಣ್ಣಲು ತಿನ್ನಲು ಸಮಸ್ಯೆಯಿರಲಿಲ್ಲಾ. ಗೌಡರ ಹೊಲಗಳಲ್ಲಿ ಗೇಣಿಗೆ ಮಾಡುತ್ತಿದ್ದ ಮಕ್ಕಳು ಬೆಳೆಯನ್ನು ಚೆನ್ನಾಗಿ ತೆಗೆಯುತ್ತಿದ್ದರು. ಅದ್ನ ಮಾರಿದ್ರೇ ರೊಕ್ಕನೂ ಸಿಗುತಿತ್ತು. ಸಂಸಾರ ಮಾಡಲು ಯಾರನ್ನು ಹೋಗಿ ಕಾಲಿಡಿದುಕೊಳ್ಳುವ ಪರಿಸ್ಥಿತಿ ಭೀಮಪ್ಪನಿಗೆ ಇರಲಿಲ್ಲಾ. ಹೀಗಾಗಿ ಕರಿಯನನ್ನು ಓದಿಸಲು ಭೀಮಪ್ಪ ಚಿಂತಿ ಮಾಡಿ ಶಾಲೆಗೆ ಸೇರಿಸಿದ್ನು. ಕರಿಯ ತಂದೆ ಮಾತಿಗೆ ಹೆದರದೆ ಬೆಳೆದಿದ್ದರಿಂದ ಇವ ಓದುವುದನ್ನು ಬಿಟ್ಟು, ಊರಲ್ಲಿನ ಗೆಣೆಕಾರರ ಜೊತೆಗೂಡಿ ಉರಿಬಿಸಿಲಿನಲ್ಲಿ ಜೇನು- ಹಳ್ಳ, ಕೆರೆಗಳಲ್ಲಿ ಮೀನು ಹಿಡಿಯುವುದು ಮಾಡುತ್ತ ಹೀಗೆಯೇ ಬಾಲ್ಯದ ಶಾಲೆಯನ್ನು ಮುಗಿಸಿದ. ಹತ್ತನೇ ತರಗತಿಯ ಪಬ್ಲಿಕ್ ಪರೀಕ್ಷೆಯಲ್ಲಿ ಮೂರು ಬುಕ್ಸ್ ಫೇಲ್ ಮಾಡಿಕೊಂಡು ಮನೆ ಸೇರಿದ, ಅದರೂ ಭೀಮಪ್ಪ 'ಜೂನ್‌ಗೆ ಪರೀಕ್ಷೆ ಬರಿ ಮಗ...' ಎಂದ. ಸೋತ ಮಗನಿಗೆ ಒಂದಿಷ್ಟು ಬುದ್ಧಿಮಾತನ್ನು ಹೇಳಿದನು. ಅದರೆ ಕರಿಯ ಜೂನ್ ತಿಂಗಳಿನ ಪರೀಕ್ಷೆಯಲ್ಲಿ ಉತ್ತೀರ್ಣನಾಗದೆ ಊರಿಗೆ ಬಂದು ಠಿಕಾಣೆ ಹೂಡಿದ್ನು. ಇವ್ನು ಊರಲ್ಲಿ ಓದೋದು ಮಾಡ್ದೆ, ಯಾವುದೋ ಬ್ರಾಹ್ಮಣ ಹುಡುಗಿಯನ್ನು ಪಿರೂತಿ ಮಾಡಿ ಜೈಲು ಕಂಬಿ ಎಣಿಸುವಂತಾದ್ನು. ಆಗ ಭೀಮಪ್ಪ ಊರಿನ ಗೌಡ್ರೂ, ಗೊಂಚೀಕಾರರ ಕಾಲಿಗೆ ಬಿದ್ದು ಅವನನ್ನು ಆ ಕಂಬಿಯಿಂದ ಪಾರು ಮಾಡಿದ್ನು. ಊರಿನವರೆಲ್ಲಾ ಕರಿಯನನ್ನು 'ನಿಮ್ಮ ತಂದೆ ಎಷ್ಟು ಮರ್ಯಾದಸ್ಥ. ನೀ ಇಂಥ ಕೆಲಸ ಮಾಡೋಕೆ ನಾಚಿಕೆ ಅಗಲ್ಲಾವೇನ್ಲೇ ಬಡ್ಡೇದೆ' ಎಂದು ಉಗುಳಿ ಉಪ್ಪಾಕಿದರು.

ಇಷ್ಟೆಲ್ಲಾ ಅದ್ರೂ ಅವ್ನು ತಂದೆಯ ದಾರಿಯಲ್ಲಿ ನಡೆಯದೆ ಪೋಲಿ ಹುಡುಗರ ಜೊತೆಗೂಡಿ, ಅವರಿವರ ಹೊಲಗಳಲ್ಲಿ ಕೆಲಸ ಮಾಡಿ ದುಡಿದ ದುಡ್ಡನು ಮನೆಗೆ ಕೊಡದೆ ಸಾರಾಯಿಗಿರಾಯಿ